# ಔಷಧಗಳ ಆಗರ ಔದುಂಬರ

■ ಚಿತ್ರ ಬರಹ: **ಲತಾ ಹೆಗಡೆ**



ಔದುಂಬರ ಅಥವಾ ಅತ್ತಿಮರ ಔಷಧೀಯ ಗುಣಗಳ ಆಗರವನ್ನೇ ಹೊತ್ತಂತಹ ಸಸ್ಯ. ಆಡುಭಾಷೆಯಲ್ಲಿ ಅತ್ತಿಮರ ಎಂದು ಕರೆಯುವ ಈ ಮರದ ಎಲ್ಲ ಭಾಗಗಳೂ ಅಪಾರವಾದ ಔಷಧೀಯ ಗುಣಗಳನ್ನು ಹೊಂದಿವೆ. ಹೀಗಾಗಿ ಇದನ್ನು ‘ಕಲಿಯುಗದ ಕಲ್ಪತರು’ ಎಂದು ಕರೆಯಲಾಗುತ್ತದೆ. ಕಾಡು ಮತ್ತು ನದಿ ತೀರಗಳಲ್ಲಿ ಹೆಚ್ಚಾಗಿ ಕಾಣಸಿಗುವ ಇದರ ಮೂಲ ಆಸ್ಟ್ರೇಲಿಯಾ, ಮಲೇಷ್ಯಾ, ಉತ್ತರಪೂರ್ವ ಏಷ್ಯಾ ಆದರೂ ಹಿಂದೂಗಳು ಮತ್ತು ಬೌದ್ಧರಿಗೆ ಪವಿತ್ರ ಮರವೆನ್ನಿಸಿದೆ. ಅದಕ್ಕಾಗಿ ಧಾರ್ಮಿಕ ವಿಧಿವಿಧಾನಗಳಲ್ಲಿ ಬಳಸಲಾಗುತ್ತದೆ. ಸದಾ ಹಸಿರಾಗಿಯೇ ಇರುವ ಈ ಮರ ‘ಅತ್ತಿ’ ಎಂದು ದಕ್ಷಿಣ ಭಾಗದಲ್ಲೂ, ‘ಲಾರ್' ಎಂದು ಉತ್ತರ ಭಾಗದಲ್ಲೂ ಕರೆಯುವುದು ಪ್ರಚಲಿತದಲ್ಲಿದೆ.

ಆಂಗ್ಲ ಭಾಷೆಯಲ್ಲಿ 'ಕ್ಲಸ್ಟರ್ ಫಿಗ್' ಮತ್ತು ವ್ಯಾಪಾರ ಜಗತ್ತಿನಲ್ಲಿ 'ಕಂಟ್ರೀ ಫಿಗ್' ಎಂತಲೂ ಕರೆಯಲ್ಪಡುವ ಇದರ ಸಸ್ಯ ಶಾಸ್ತ್ರೀಯ ಹೆಸರು ‘ಫೈಕಸ್ ರೇಸ್ಮೋಸಾ’ (**Ficus Racemosa**) ಇದು ಸುಮಾರು 10 ರಿಂದ 16 ಮೀಟರ್ ಎತ್ತರ ಬೆಳೆಯಬಲ್ಲದು. ಎಲೆಗಳ ಉದ್ದ 3 ರಿಂದ 4 ಇಂಚಿನಷ್ಟು. ಹಣ್ಣುಗಳು ಕಡು ಗುಲಾಬಿ ಇಲ್ಲವೇ ಕಿತ್ತಳೆ ಬಣ್ಣದ್ದಾಗಿದ್ದು 1 ರಿಂದ 2 ಇಂಚಿನಷ್ಟು ಸುತ್ತಳತೆಯ ವೃತ್ತಾಕಾರದ್ದಾಗಿವೆ. ಈ ಹಣ್ಣುಗಳಿಗೆ ವಿಶಿಷ್ಟ ಸುಗಂಧವಿದೆಯಾದ್ದರಿಂದ ಮರದ ಸುತ್ತಲೂ ಸುವಾಸನೆ ಹರಡಿರುತ್ತದೆ. ಅಂಕುಡೊಂಕಾದ ಕಾಂಡದ ಬಣ್ಣ ಕಂದು. ವಿಚಿತ್ರವೆಂದರೆ ಎಲೆಗಳಿಲ್ಲದ ಕಾಂಡಗಳಿಂದ ನೇರವಾಗಿ ಹಣ್ಣುಗಳು ಗೊಂಚಲು ಗೊಂಚಲಾಗಿ ಬಿಡುತ್ತವೆ. ಅತ್ತಿಮರದ ಕಾಂಡದಲ್ಲಿ ವರ್ಷವಿಡೀ ಹಣ್ಣುಗಳಿರುವುದರಿಂದ 'ಸದಾಫಲ' ಎಂತಲೂ ಹೆಸರಿದೆ. ಈ ಮರದ ಯಾವುದೇ ಭಾಗವನ್ನು ಕೆತ್ತಿದಾಗ ಅಥವಾ ತುಂಡರಿಸಿದಾಗ ಒಸರುವ ಹಾಲು ನಂತರದಲ್ಲಿ ಹಳದೀ ವರ್ಣಕ್ಕೆ ತಿರುಗುತ್ತದೆ. ಅಥರ್ವ ವೇದದಲ್ಲಿ ಅತ್ತಿಹಣ್ಣುಗಳ ಸೇವನೆ ಬಲವರ್ಧಕ ಎಂದು ಉಲ್ಲೇಖಿಸಲಾಗಿದೆ.

ದತ್ತ ದೇವಸ್ಥಾನಗಳಲ್ಲಿ ಕಡ್ಡಾಯವಾಗಿ ಉಪಯೋಗಿಸುತ್ತಾರೆ. ಔದುಂಬರ ವೃಕ್ಷ ದತ್ತಗುರುವಿಗೆ ಅತೀ ಪ್ರಿಯ. ಭಗವಂತನಾದ ವಿಷ್ಣುವಿನ ಅನೇಕ ಹೆಸರುಗಳಲ್ಲಿ ಔದುಂಬರವೂ ಒಂದು. ಬೌದ್ಧರು ಇದಕ್ಕೆ ‘ನೀಲಿ ಕಮಲ' ಎನ್ನುತ್ತಾರೆ.

## ಔಷಧೀಯ ಗುಣಗಳು

ಬಾಯಿ ಮತ್ತು ವಸಡಿನ ರೋಗಕ್ಕೆ ಇದರ ಕಷಾಯ ದಿವ್ಯ ಔಷಧ. ಚಿಕನ್ ಪಾಕ್ಸ್, ಕ್ಷಯ, ಸೈನಸೈಟಿಸ್, ಹೊಟ್ಟೆನೋವು, ಉರಿಯೂತ, ಪಿತ್ತದೋಷ, ಅಸ್ತಮಾ, ಬ್ರಾಂಕೈಟಿಸ್, ಮೂಲವ್ಯಾಧಿ, ಮೂತ್ರ ಸಂಬಂಧಿ ಕಾಯಿಲೆಗಳ ನಿವಾರಣೆಗೆ ಅತ್ತಿಮರದ ಹಾಲು, ತೊಗಟೆ, ಹಣ್ಣುಗಳು, ಬೇರು, ಎಲೆಗಳಿಂದ ತಯಾರಿಸಿದ ಔಷಧಿಗಳು ಉಪಯುಕ್ತವೆನ್ನಿಸಿವೆ. ಮೂಗಿನ ರಕ್ತಸ್ರಾವ, ಗರ್ಭಕೋಶದ ಅನಿಯಮಿತ ರಕ್ತಸ್ರಾವ, ಬಿಳಿಸೆರಗನ್ನು ಹತೋಟಿಯಲ್ಲಿಡಲು ಉತ್ತಮ ಔಷಧವೆಂದು ಪರಿಗಣಿಸಲಾಗಿದೆ. ■

SDP AYURVEDA
ಎಸ್‌ಡಿಪಿ
ದಂತ ಚೂರ್ಣ
ನೈಸರ್ಗಿಕ ಆಯುರ್ವೇದ ದಂತಮಂಜನ
॥ ಪ್ರಾತರ್ಭುಕ್ತ್ವಾ ಚ ಮೃದ್ವಗ್ರಂ ಕಷಾಯ ಕಟು ತಿಕ್ತಕಂ॥ (ವಾಗ್ಭಟ)
ಚೊಗರು, ಖಾರ, ಕಹಿ ಇರುವ ಗಿಡಮೂಲಿಕೆಗಳಿಂದ ಹಲ್ಲು ಉಜ್ಜಿದರೆ
ಅಲ್ಲಾಡುವ ಹಲ್ಲುಗಳು ಸ್ಥಿರವಾಗುವುದು.
ಒಸಡಿನ ರಕ್ತಸ್ರಾವ ನಿಲ್ಲುವುದು.
ಬಾಯಿವಾಸನೆ ನಿವಾರಿಸುವುದು.
ಹಲ್ಲು ಜುಂಗುಟ್ಟುವುದನ್ನು ತಡೆಯುವುದು.
ಆರೋಗ್ಯವಂತ ಹಲ್ಲುಗಳಿಗಾಗಿ
ಎಸ್‌ಡಿಪಿ ದಂತಚೂರ್ಣ ಉಪಯೋಗಿಸಿ




Proprietary Ayurvedic Medicine
ಎಸ್‌ಡಿಪಿ ರೆಮೆಡೀಸ್ & ರಿಸರ್ಚ್ ಸೆಂಟರ್
ಪರ್ಲಡ್ಕ, ಪುತ್ತೂರು, ದ.ಕ.
ಇಮೇಲ್: sdpayurveda@gmail.com
Customer Care No.: +91 99004 09184